**ಈ ಪ್ರಶ್ನೆಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು**

# ಪ್ರಶ್ನೆ ಪುಸ್ತಿಕೆ

# ನಿರ್ದಿಷ್ಟ ಪತ್ರಿಕೆ

# ಪತ್ರಿಕೆ II

# (271)

**ಪ್ರಶ್ನೆ ಪತ್ರಿಕೆ ಶ್ರೇಣಿ**

**A**

***ಸಮಯ : 2 ಗಂಟೆಗಳು*** ***ಗರಿಷ್ಠ ಅಂಕಗಳು : 200***

## ಸೂಚನೆಗಳು

1. ಪರೀಕ್ಷೆ ಪ್ರಾರಂಭವಾದ ಕೂಡಲೇ ನಿಮ್ಮ ಪ್ರಶ್ನೆಪತ್ರಿಕೆಯಲ್ಲಿ ಅಮುದ್ರಿತ ಅಥವಾ ಹರಿದಿರುವ ಅಥವಾ ಬಿಟ್ಟು ಹೋಗಿರುವ ಪುಟಗಳು ಅಥವಾ ಪ್ರಶ್ನೆಗಳು ಇತ್ಯಾದಿಗಳು ಕಂಡುಬಂದಲ್ಲಿ ನಿಮ್ಮ ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಶ್ರೇಣಿಯ ಪೂರ್ಣ ಪ್ರಶ್ನೆ ಪತ್ರಿಕೆಯೊಂದಿಗೆ ಬದಲಾಯಿಸಿ ಕೊಳ್ಳತಕ್ಕದ್ದು.
2. **ಅಭ್ಯರ್ಥಿಯು ಪ್ರಶ್ನೆ ಪತ್ರಿಕೆಯ ಶ್ರೇಣಿಯು, ತಮ್ಮ ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಪ್ರಶ್ನೆಪತ್ರಿಕೆಯ ಶ್ರೇಣಿಯಾಗಿರುವುದೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ವ್ಯತ್ಯಾಸಗಳು ಕಂಡುಬಂದಲ್ಲಿ, ಸಂವೀಕ್ಷಕರ ಗಮನಕ್ಕೆ ತರುವುದು ಮತ್ತು ಪ್ರಶ್ನೆಪತ್ರಿಕೆಯ ಶ್ರೇಣಿಯು ತಮಗೆ ಹೊಂದುವ (ಅದೇ) ಪ್ರಶ್ನೆ ಪತ್ರಿಕೆಯಾದ ಮತ್ತು ಓ.ಎಂ.ಆರ್.ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಶ್ರೇಣಿಯ ಪ್ರಶ್ನೆ ಪತ್ರಿಕೆಯನ್ನೇ ಪಡೆಯತಕ್ಕದ್ದು.**
3. ಪಕ್ಕದಲ್ಲಿ ಒದಗಿಸಿರುವ ಪ್ರಶ್ನೆಪತ್ರಿಕೆಯ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ **ಬೇರೆ ಏನನ್ನೂ ಬರೆಯಬಾರದು.**

| ನೋಂದಣಿ ಸಂಖ್ಯೆ | | | | | | |
|---|---|---|---|---|---|---|
| | | | | | | |

4. **ಈ ಪ್ರಶ್ನೆ ಪುಸ್ತಿಕೆ 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.** ಪ್ರತಿಯೊಂದು ಪ್ರಶ್ನೆಯು **4** ಪ್ರತಿಕ್ರಿಯೆಗಳನ್ನು (ಉತ್ತರಗಳನ್ನು) ಒಳಗೊಂಡಿರುತ್ತದೆ. ನೀವು ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಅದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಓ.ಎಂ.ಆರ್. ಉತ್ತರ ಹಾಳೆಯ ಮೇಲೆ **ಕೇವಲ ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು**. ಓ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿನ ವಿವರವಾದ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. **ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ.**
7. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
8. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಓ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಓ.ಎಂ.ಆರ್. ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.
9. **ತಪ್ಪು ಉತ್ತರಗಳಿಗೆ ವಿಧಿಸಲಾಗುವ ದಂಡ :**
**ವಸ್ತುನಿಷ್ಠ ಬಹು ಆಯ್ಕೆ ಪ್ರಶ್ನೆ ಪತ್ರಿಕೆಗಳಲ್ಲಿ ಅಭ್ಯರ್ಥಿಗಳು ಗುರುತು ಮಾಡಿದ ತಪ್ಪು ಉತ್ತರಕ್ಕೆ ದಂಡ ವಿಧಿಸಲಾಗುತ್ತದೆ.**
   (i) ಪ್ರತಿಯೊಂದು ಪ್ರಶ್ನೆಯ ಉತ್ತರಕ್ಕೆ ನಾಲ್ಕು ಪರ್ಯಾಯಗಳಿವೆ. ಅಭ್ಯರ್ಥಿಯು ತಪ್ಪು ಉತ್ತರ ನೀಡಿದ ಪ್ರತಿಯೊಂದು ಪ್ರಶ್ನೆಗೆ ಆ ಪ್ರಶ್ನೆಗೆ ನಿಗದಿಪಡಿಸಲಾದ ಅಂಕಗಳಲ್ಲಿ **¼** ರಷ್ಟು ಅಂಕಗಳನ್ನು ದಂಡ ರೂಪದಲ್ಲಿ ಕಳೆಯಲಾಗುವುದು.
   (ii) ಅಭ್ಯರ್ಥಿಯು ಒಂದು ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ಉತ್ತರವನ್ನು ನೀಡಿದರೆ, ಅಲ್ಲಿರುವ ಒಂದು ಉತ್ತರವು ಸರಿಯಿದ್ದರೂ ಸಹ ಅದನ್ನು **ತಪ್ಪು ಉತ್ತರ** ಎಂದು ಪರಿಗಣಿಸಲಾಗುವುದು ಮತ್ತು ಮೇಲೆ ತಿಳಿಸಿದಂತೆಯೇ ಆ ಪ್ರಶ್ನೆಗೆ ದಂಡ ವಿಧಿಸಲಾಗುವುದು.
   (iii) ಅಭ್ಯರ್ಥಿಯು ಪ್ರಶ್ನೆಯನ್ನು ಖಾಲಿ ಬಿಟ್ಟಿದ್ದಾಗ ಅಂದರೆ ಉತ್ತರವನ್ನು ನೀಡದಿದ್ದಾಗ ಆ ಪ್ರಶ್ನೆಗೆ **ಯಾವುದೇ ದಂಡ** ವಿಧಿಸಲಾಗುವುದಿಲ್ಲ.

**ಯಾವುದೇ ರೀತಿಯ ಮೊಬೈಲ್ ಫೋನ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯೂನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**

1. ಕೇಶಿರಾಜನು ಹೇಳುವ ಕನ್ನಡದ ಅಸಾಧಾರಣ ಲಕ್ಷಣಗಳಲ್ಲಿ ಇದೂ ಒಂದು

(1) ವಿಭಕ್ತಿ ಪ್ರತ್ಯಯಗಳು

(2) ಪದೋತ್ತಮ ಶಿಥಿಲತ್ವ

(3) ಸಂಧಿಗಳು

(4) ವ್ಯಾಕರಣ ವಿಶೇಷಗಳು

2. 7ನೇ ಶತಮಾನಕ್ಕೆ ಸೇರಿದ ಕಪ್ಪೆ ಅರಭಟ್ಟನ ಶಾಸನ ಅಥವಾ ಬಾದಾಮಿ ಶಾಸನ ಯಾವ ಗ್ರಾಮದಲ್ಲಿ ದೊರೆತಿದೆ ?

(1) ತಾಳೀ ಕೋಟೆ

(2) ಕಲ್ಲಿ ಕೋಟೆ

(3) ತಟ್ಟು ಕೋಟೆ

(4) ಕಾಕನ ಕೋಟೆ

3. "ಗುಣ ವಿಶಿಷ್ಟವಾದ ಪದರಚನೆಯೇ ರೀತಿ; ಇಂಥ ರೀತಿಯೇ ಕಾವ್ಯದ ಆತ್ಮ" ಎಂದು ಹೇಳಿದ ಆಲಂಕಾರಿಕ

(1) ವಿಶ್ವನಾಥ

(2) ಸಿಂಗಭೂಪಾಲ

(3) ವಿದ್ಯಾನಾಥ

(4) ವಾಮನ

4. ಸಾಂಖ್ಯತತ್ತ್ವದ ಆಧಾರದ ಮೇಲೆ ರಸಸಿದ್ಧಾಂತವನ್ನು ಮಂಡಿಸಿದವರು

(1) ಭಟ್ಟನಾಯಕ

(2) ಭರತ

(3) ಲೊಲ್ಲಟ

(4) ಆನಂದವರ್ಧನ

5. ಭಾಷೆಯೆಂಬ ಬೆಳಕು ಬೆಳಗದಿದ್ದರೆ ಲೋಕವೆಲ್ಲ ಕತ್ತಲಿನಿಂದ ತುಂಬಿ ಹೋಗುತ್ತಿತ್ತು. ಈ ಹೇಳಿಕೆಯನ್ನು ನೀಡಿದವರು

(1) ದಂಡಿ

(2) ಆನಂದ ವರ್ಧನ

(3) ಭಟ್ಟತೌತ

(4) ಪಾಣಿನಿ

6. ವೀರರಾಜಪೇಟೆ – ವಿರಾಜಪೇಟೆ – ಈ ಭಾಷಿಕ ಬದಲಾವಣೆಯನ್ನು ಈ ರೀತಿ ಕರೆಯುತ್ತಾರೆ

(1) ವರ್ಣ ಪಲ್ಲಟ

(2) ಸಾದೃಶ್ಯಾಕ್ಷರ ಲೋಪ

(3) ವರ್ಣ ವ್ಯತ್ಯಯ

(4) ಮೇಲೆ ಹೇಳಿದ ಯಾವುದೂ ಅಲ್ಲ

7. ಕನ್ನಡದ ಚಂಪೂ ಶೈಲಿಗೆ ಪ್ರೇರಣೆಯಾದ ಭಾಷೆ

(1) ಮಾರ್ಗ ಭಾಷೆ

(2) ಪಾಳಿ ಭಾಷೆ

(3) ದೇಶಿ ಭಾಷೆ

(4) ಪ್ರಾಕೃತ ಭಾಷೆ

8. 'ಸ್ವರಾನುರೂಪ್ಯತೆ ಪ್ರಕ್ರಿಯೆ' ಎಂದರೆ

(1) ದ್ರಾವಿಡ ಭಾಷೆಗಳಲ್ಲಿ ವ್ಯಂಜನ ಪಲ್ಲಟ

(2) ದ್ರಾವಿಡ ಭಾಷೆಗಳಲ್ಲಿ ಸ್ವರ ಪಲ್ಲಟ

(3) ದ್ರಾವಿಡ ಭಾಷೆಗಳಲ್ಲಿನ ವ್ಯಂಜನ ದ್ವಿತ್ವಗಳು

(4) ಮೂಲ ದ್ರಾವಿಡ ಸ್ವರ ಧ್ವನಿಮಾ ವ್ಯವಸ್ಥೆ

9. ವೈದಿಕ ದೃಷ್ಟಿಯಿಂದ ಮೊಟ್ಟ ಮೊದಲು ರಚಿತವಾದ ಭಾಗವತ ಕಾವ್ಯ

(1) ಜಗನ್ನಾಥ ವಿಜಯ
(2) ಕರ್ನಾಟಕ ಭಾರತ ಕಥಾ ಮಂಜರಿ
(3) ನೇಮಿನಾಥ ಪುರಾಣ
(4) ಚಾಟುವಿಠಲನ ಕನ್ನಡ ಭಾಗವತ

10. 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ' ಮಾಲಿಕೆಯಲ್ಲಿ ಷಟ್ಪದಿ ಸಾಹಿತ್ಯ ಸಂಪುಟವನ್ನು ರಚಿಸಿದವರು

(1) ಹು.ಕ. ಜಯದೇವ
(2) ಕಾಳೇಗೌಡ ನಾಗವಾರ
(3) ಕೆ.ವಿ. ನಾರಾಯಣ
(4) ಕೆ. ಮರುಳಸಿದ್ದಪ್ಪ

11. 'ಶಂಭುಜಕ್ಕೇಶ್ವರ' ಎಂಬ ವಚನಾಂಕಿತವುಳ್ಳ ವಚನಕಾರ್ತಿ

(1) ಸತ್ಯಕ್ಕ
(2) ಅಮುಗೆ ರಾಯಮ್ಮ
(3) ಮುಕ್ತಾಯಕ್ಕ
(4) ಆಯ್ದಕ್ಕಿ ಲಕ್ಕಮ್ಮ

12. ಆಂಡಯ್ಯನ ಕಾವ್ಯದ ಮೂಲ ಹೆಸರು

(1) ದಿಗ್ವಿಜಯ
(2) ಅರ್ಜುನ ವಿಜಯ
(3) ಶ್ರೀವಿಜಯ
(4) ಮದನ ವಿಜಯ

13. ವಚನಗಳ ಮೂಲವನ್ನು ತಮಿಳಿನ ತೇವಾರಂಗಳಿಗೆ ಹೋಲಿಸಿದವರು

(1) ಡಿ.ಎಲ್. ನರಸಿಂಹಾಚಾರ್
(2) ರಂ.ಶ್ರೀ. ಮುಗಳಿ
(3) ಪು.ತಿ. ನರಸಿಂಹಾಚಾರ್
(4) ಎಲ್. ಬಸವರಾಜು

14. ರಗಳೆ ಕನ್ನಡದ ಯಾವ ಛಂದೋರೂಪವಾಗಿದೆ ?

(1) ಮಾರ್ಗ ಛಂದೋರೂಪ
(2) ದೇಸಿ ಛಂದೋರೂಪ
(3) ಹಳಗನ್ನಡ ಛಂದೋರೂಪ
(4) ಹೊಸಗನ್ನಡ ಛಂದೋರೂಪ

15. "ಉಂಡೂ ಉಪವಾಸ, ಬಳಸಿ ಬ್ರಹ್ಮಚಾರಿ" ಮಾತು ಕಂಡು ಬರುವ ಕೃತಿ

(1) ಮೋಹನ ತರಂಗಿಣಿ
(2) ಯಶೋಧರ ಚರಿತೆ
(3) ಅನಂತಮತಿ ಚರಿತೆ
(4) ಭರತೇಶ ವೈಭವ

16. ಕೆಳಕಂಡವುಗಳಲ್ಲಿ ಸರಿಯಾದುದನ್ನು ಹೊಂದಿಸಿ :

| | ಕವಿಗಳು | | ಕಾಲ |
|---|---|---|---|
| A. | ದೇವರಾಜ | I. | 1150 |
| B. | ರತ್ನಾಕರ ವರ್ಣಿ | II. | 1680 |
| C. | ನಂಜುಂಡ | III. | 1410 |
| D. | ಸಂಚಿ ಹೊನ್ನಮ್ಮ | IV. | 1557 |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | III | IV | I | II |
| (2) | IV | I | II | III |
| (3) | II | III | IV | I |
| (4) | I | II | III | IV |

17. ಭಾಷಾ ವರ್ಗೀಕರಣಕ್ಕೆ ಸೇರದ್ದನ್ನು ಗುರ್ತಿಸಿ

(1) ಸಾಂಸ್ಕೃತಿಕ ವರ್ಗೀಕರಣ

(2) ಭೌಗೋಳಿಕ ವರ್ಗೀಕರಣ

(3) ಜನಾಂಗೀಯ ವರ್ಗೀಕರಣ

(4) ಸಂಕೇತ ಶಾಸ್ತ್ರೀಯ ವರ್ಗೀಕರಣ

18. ಇಲ್ಲಿಯ ಪ್ರಾದೇಶಿಕ ಪದಗಳ ಜೋಡಿಗಳಲ್ಲಿ ಸರಿಯಾದುದನ್ನು ಆರಿಸಿ

A. ಕನ್ನಡ – ತಿರ

B. ತಮಿಳು – ತಿರೈ

C. ಮಲಯಾಳಂ – ತೆರೆ

D. ತೆಲುಗು – ತೆರೆ

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮತ್ತು B

(2) B ಮತ್ತು D

(3) B ಮತ್ತು C

(4) A ಮತ್ತು C

19. ಇವುಗಳಲ್ಲಿ ಸಹಜವಾಗಿ ಕನ್ನಡದ್ದಲ್ಲದ ಧ್ವನಿ ಎಂದರೆ

(1) ಕ

(2) ಉ

(3) ಭ

(4) ನ

20. ಗುಂಪಿಗೆ ಸೇರದ ಪದವನ್ನು ಗುರ್ತಿಸಿ

(1) ಅನುರಣನ

(2) ಅನುಕರಣ

(3) ಕಾವ್ಯ ಪ್ರತಿಮೆ

(4) ಪರಂಪರೆ ಮತ್ತು ವೈಯಕ್ತಿಕ ಪ್ರತಿಭೆ

21. ಇವುಗಳಲ್ಲಿ ಜನ್ನನ ಚಿತ್ರಣದ ದಿಟ್ಟ ಹೆಣ್ಣಾದ ಅಮೃತಮತಿಯದ್ದಲ್ಲದ ಮಾತು ಯಾವುದು ?

(1) ಒಲವಾದೊಡೆ ರೂಪಿನ ಕೋಟಲೆಯೇವುದೊ

(2) ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್

(3) ಕಾರ್ಯಮಾಗೆ ಕಾರಣದಾ ಫಲಮೇನ್

(4) ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ

22. ತನ್ನನ್ನು ವಿರೋಧಿಸಿದವರಿಗೆ ಗೋವಿಂದ ಪೈಯವರು "ಇಂದು ಒಬ್ಬನೇ ನಡೆದ ಮೇಕೆ ದಾರಿಯೆ ಮುಂದೆ ತೇರೆಳೆವ ಹೆದ್ದಾರಿ" ಎಂದು ಅವರು ಉತ್ತರಿಸಿದ್ದು ಮೊದಲ ಬಾರಿಗೆ

(1) ಭಾವಗೀತೆಗಳನ್ನು ಬರೆಯ ಹೊರಟಾಗ

(2) ಕಾದಂಬರಿ ರಚನೆಯ ಹೊತ್ತಿನಲ್ಲಿ

(3) ಪ್ರಾಸತ್ಯಾಗ ಮಾಡಿ ಕವನ ಬರೆಯುವಾಗ

(4) ಅಂತರ್ಜಾತಿ ವಿವಾಹದ ಸಂದರ್ಭದಲ್ಲಿ

23. 'ನವರಾತ್ರಿ' ಕೃತಿಯ ಛಂದಸ್ಸು

(1) ಸಾಂಗತ್ಯ

(2) ಪಿರಿಯಕ್ಕರ

(3) ಅಷ್ಟಷಟ್ಪದಿ

(4) ಸರಳ ರಗಳೆ

24. "ಒಪ್ಪಿಸಿದೆಂ ಕೈಯ್ಯೆಡೆಯಂದಪ್ಪೈಸಿದ ನಿನ್ನ ಮಗನನೀಗಳೆ ನಿನಗೆಂ" ಈ ಮಾತನ್ನು ಹೇಳಿದವರಾರು ?

(1) ಗಾಂಧಾರಿ

(2) ದ್ರೌಪದಿ

(3) ಗಂಗಾದೇವಿ

(4) ಕುಂತಿ

**25.** 'ಸೂಟ್ಪಿಡೆಯಲಪ್ಪುದು ಕಾಣಾ ಮಹಾಜಿರಂಗದೊಳ್' ಎಂಬ ಪ್ರಸಿದ್ಧವಾದ ಮಾತು ಪಂಪಭಾರತದ 10 ನೇ ಆಶ್ವಾಸದಲ್ಲಿದೆ. ಇದನ್ನು ಯಾರು-ಯಾರಿಗೆ-ಯಾವಾಗ ಹೇಳಿದರು ?

(1) ಭೀಷ್ಮ ಕರ್ಣನಿಗೆ ಹೇಳಿದ್ದು, ತನಗೆ ಸೇನಾಧಿಪತಿ ಪಟ್ಟ ಕಟ್ಟಿದ ಸಂದರ್ಭದಲ್ಲಿ

(2) ಕರ್ಣ ದುರ್ಯೋಧನನಿಗೆ ಹೇಳಿದ್ದು, ಕೃಷ್ಣಸಂಧಾನದ ಸಮಯದಲ್ಲಿ

(3) ದ್ರೋಣ ಕರ್ಣನಿಗೆ ಹೇಳಿದ್ದು, ಕರ್ಣ ಸೇನಾಧಿಪತಿಯಾದಾಗ

(4) ದುರ್ಯೋಧನ ಧೃತರಾಷ್ಟ್ರನಿಗೆ ಹೇಳಿದ್ದು, ದ್ರೋಣನಿಗೆ ಸೇನಾಧಿಪತ್ಯ ನೀಡಿದಾಗ

**26.** 'ಸ್ತ್ರೀ ರೂಪಮೆ ರೂಪಂ, ಶೃಂಗಾರಮೆ ರಸಂ' ಎಂಬ ಮಾತು ಬರುವ ಕಾವ್ಯ

(1) ನೇಮಿನಾಥ ಪುರಾಣಂ

(2) ಯಶೋಧರ ಚರಿತೆ

(3) ಲೀಲಾವತಿ ಪ್ರಬಂಧಂ

(4) ಗಿರಿಜಾ ಕಲ್ಯಾಣಂ

**27.** ಕಾವ್ಯ ಮೀಮಾಂಸೆ ಮತ್ತು ಕಾವ್ಯ ವಿಮರ್ಶೆಗೆ ಸಂಬಂಧಿಸಿದ ಸಂಗತಿಗಳನ್ನು ಜೊತೆ ಜೊತೆಯಲ್ಲೇ ಚರ್ಚಿಸಿದವರು

(1) ಅರಿಸ್ಟಾಟಲ್

(2) ಪ್ಲೇಟೋ

(3) ತೀ.ನಂ. ಶ್ರೀ

(4) ಜಿ.ಎಸ್. ಶಿವರುದ್ರಪ್ಪ

**28.** "The past should be altered by the present as much as the present is directed by the past" – ಕಲೆಯ ಬಗ್ಗೆ ಅನುಪಮವಾದ ಈ ಹೊಸಹೇಳಿಕೆಯನ್ನು ನೀಡಿದವನು

(1) ಜೆ.ಎ. ರಿಚರ್ಡ್ಸ್

(2) ವಿಲಿಯಂ ವರ್ಡ್ಸ್‌ವರ್ತ್

(3) ಎಜ್ರಾ ಸೌಂಡ್

(4) ಇವರು ಯಾರೂ ಅಲ್ಲ

**29.** ಉತ್ತರ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಭಾಷೆ

(1) ಕೊಲಾಮಿ

(2) ಕೋತ

(3) ಪೆಂಗೊ

(4) ಬ್ರಾಹ್ವೀ

**30.** ತೌಲನಿಕ ಭಾಷಾ ವಿಜ್ಞಾನದ ಪಿತಾಮಹನೆಂದು ಕರೆಸಿಕೊಂಡಿರುವ ಭಾಷಾ ವಿಜ್ಞಾನಿ

(1) ಡಾ. ಕ್ಯಾರಿ

(2) ಮ್ಯಾಕ್ಸ್ ಮುಲ್ಲರ್

(3) ಸರ್ ವಿಲಿಯಂ ಜೋನ್ಸ್

(4) ಜಾಕ್ಸನ್

**31.** ತಮಿಳು, ಕನ್ನಡ, ತೆಲುಗು, ಮಲೆಯಾಳಂ ಭಾಷೆಗಳನ್ನು 'ಮಲಬಾರಿ ಭಾಷೆಗಳು' ಎಂದು ಕರೆದ ಭಾಷಾತಜ್ಞ

(1) ರಾಸ್ ಮಸ್ಕರಾಸ್ಕ

(2) ಎಮಿನೊ

(3) ಕಾಲ್ಡ್‌ವೆಲ್

(4) ಎಸ್ಪರ್ಸನ್

**32.** ‘ವ್ಯುತ್ಪತ್ತಿ’ ಎಂದರೆ

(1) ಕಾವ್ಯ ಹೇಗೆ ಹುಟ್ಟುತ್ತದೆ ಎಂಬುದರ ವಿವರಣೆ

(2) ಕಾವ್ಯಕ್ಕೆ ಒದಗುವ ವಿಪತ್ತುಗಳು

(3) ವಿಭಿನ್ನ ವಿಷಯಗಳನ್ನು ಕುರಿತ ಕವಿಯ ತಿಳುವಳಿಕೆ

(4) ಮೇಲಿನ ಯಾವುದೂ ಅಲ್ಲ

**33.** ಚಕೋರ ಪಕ್ಷಿಗಳು ಬೆಳದಿಂಗಳನ್ನು ಕುಡಿಯುತ್ತವೆ ಚಂದ್ರಕಾಂತ ಶಿಲೆ ಬೆಳದಿಂಗಳಿನಲ್ಲಿ ಕರಗುತ್ತದೆ ಮುಂತಾಗಿ ಹೇಳುವುದು ಕಾವ್ಯ ಮೀಮಾಂಸೆಯಲ್ಲಿ __________ ಎಂದು ಕರೆಸಿಕೊಳ್ಳುತ್ತದೆ.

(1) ಕವಿ ಸಮಯ

(2) ರಸಜ್ಞತೆ

(3) ಸುಕೋಮಲ ಕಲ್ಪನೆ

(4) ಪ್ರತಿಭಾ ವಿಲಾಸ

**34.** ಮಿಲೀತಾ, ಉಲ್ಲೇಖ, ಅನುಗುಣ, ಕಾವ್ಯಲಿಂಗ – ಇವೆಲ್ಲ ಯಾವುದರ ಹೆಸರುಗಳು

(1) ವಿವಿಧ ಛಂದೋಪ್ರಕಾರಗಳು

(2) ಅಲಂಕಾರಗಳ ಹೆಸರುಗಳು

(3) ಕಾವ್ಯ ಮೀಮಾಂಸೆಯ ಕೃತಿಗಳ ಹೆಸರುಗಳು

(4) ಯಾವುದೂ ಅಲ್ಲ

**35.** “ಬೇಕಾದರೆ ಕವಿಯನ್ನು ಆದರಿಸಿ, ಪೂಜಿಸಿ, ಉಡುಗೊರೆ ಕೊಡಿ, ಆದರೆ ನಮ್ಮ ಆದರ್ಶ ರಾಜ್ಯದಲ್ಲಿ ಮಾತ್ರ ನೀನಿರುವುದು ಬೇಡ ಎಂದು ಹೇಳಿ ಆತನನ್ನು ಹೊರಗೆ ಕಳುಹಿಸಿಬಿಡಿ” – ಎಂದು ಹೇಳಿದ ಪ್ರಸಿದ್ಧ ಮೀಮಾಂಸಕ

(1) ಅರಿಸ್ಟಾಟಲ್

(2) ಪ್ಲೇಟೋ

(3) ಹೊರೇಸ್

(4) ಲಾಂಜಿನಸ್

**36.** ಕಾವ್ಯ ಮೀಮಾಂಸೆಯನ್ನೇ ಕುರಿತ ಮೊಟ್ಟಮೊದಲ ಕೃತಿ

(1) ನಾಟ್ಯ ಶಾಸ್ತ್ರ

(2) ಕಾವ್ಯಾಲಂಕಾರ

(3) ಕಾವ್ಯಾದರ್ಶ

(4) ಧ್ವನ್ಯಾಲೋಕ

**37.** ‘ವಕ್ರಕವಿ ವ್ಯಾಪಾರ ಶಾಲಿನೀ’ ಎಂದು ಕಾವ್ಯಕ್ಕೆ ಸೂತ್ರರೂಪಿ ವ್ಯಾಖ್ಯಾನ ನೀಡಿದ ಆಲಂಕಾರಿಕ

(1) ಆನಂದ ವರ್ಧನ

(2) ಭಾಮಹ

(3) ಕ್ಷೇಮೇಂದ್ರ

(4) ಕುಂತಕ

**38.** ಶಾಂತರಸವನ್ನು ನವರಸಗಳ ಪೈಕಿ ಒಂದೆಂದು ಪ್ರತಿಪಾದಿಸಿದ ಆಲಂಕಾರಿಕ

(1) ಉದ್ಭಟ

(2) ರುದ್ರಟ

(3) ಆನಂದ ವರ್ಧನ

(4) ವಾಮನ

**39.** ಧ್ವನಿ ಸಿದ್ಧಾಂತವನ್ನು ಪ್ರತಿಪಾದಿಸಿದವರು

(1) ಅಭಿನವ ಗುಪ್ತ

(2) ಆನಂದ ವರ್ಧನ

(3) ಕುಂತಕ

(4) ಭಾಮಹ

**40.** ಮಹಾಪ್ರಾಣಾಕ್ಷರಗಳು ಕನ್ನಡ ಭಾಷೆಯಲ್ಲಿ 'ನಿರ್ಜೋಜ್ವಳಮಾಗಿ' ಇವೆ ಎಂದ ವ್ಯಾಕರಣಕಾರ

(1) ಕೇಶಿ ರಾಜ

(2) ನಾಗವರ್ಮ

(3) ನಯಸೇನ

(4) ಸೋಮೇಶ್ವರ

**41.** ಔಚಿತ್ಯ ಸಿದ್ಧಾಂತ ಕುರಿತು ವಿವರವಾಗಿ ಚಿಂತಿಸಿದವ

(1) ಭಾಮಹ

(2) ಅಭಿನವಗುಪ್ತ

(3) ಕುಂತಕ

(4) ಕ್ಷೇಮೇಂದ್ರ

**42.** ದ್ರಾವಿಡ ಭಾಷೆಗಳ 'ತೌಲನಿಕ ವ್ಯಾಕರಣ' ಕೃತಿ ರಚಿಸಿದವರು

(1) ಜೂಲ್ಸ್ ಬ್ಲಾಕ್

(2) ರಾಬರ್ಟ್ ಕಾಲ್ಡ್‌ವೆಲ್

(3) ಟಿ. ಬರೋ

(4) ಎಂ.ಬಿ. ಎಮಿನೋ

**43.** ಧರ್ಮಸಮನ್ವಯವನ್ನು ಪ್ರತಿಪಾದಿಸಿರುವ ಶಾಸನ

(1) ಬುಕ್ಕರಾಯನ ಶಾಸನ

(2) ಬಾದಾಮಿ ಶಾಸನ

(3) ಹಲ್ಮಿಡಿ ಶಾಸನ

(4) ಆತಕೂರು ಶಾಸನ

**44.** ಹಲಸಂಗಿ ಗೆಳೆಯರು ಸಂಪಾದಿಸಿದ ಹೆಸರಾಂತ ಜನಪದ ಕೃತಿ

(1) ಹಳ್ಳಿಯ ಹಾಡು

(2) ಮಲ್ಲಿಗೆ ದಂಡೆ

(3) ಗರತಿಯ ಹಾಡು

(4) ನಾಡ ಪದಗಳು

**45.** 'ಶಕ್ತಿ ಶಾರದೆಯ ಮೇಳ' ಕೃತಿ ಯಾವ ಸಾಹಿತ್ಯ ಪ್ರಕಾರಕ್ಕೆ ಸೇರುತ್ತದೆ ?

(1) ವಚನ

(2) ಕಾವ್ಯ

(3) ನಾಟಕ

(4) ವಿಮರ್ಶೆ

**46.** ಡಾ. ವಿಜಯಾ ದಬ್ಬೆಯವರ __________ ಕೃತಿಯು ಡಾ. ಅನುಪಮಾ ಪ್ರಶಸ್ತಿ ಪಡೆದು ಕೊಂಡಿದೆ.

(1) ನಾರಿ–ನೆಲೆ–ದಿಗಂತ

(2) ಮಹಿಳೆ-ಸಾಹಿತ್ಯ ಸಮಾಜ

(3) ಶ್ಯಾಮಲ ಸಂಚಯ

(4) ಹಿತೈಷಿಣಿಯ ಹೆಜ್ಜೆಗಳು

**47.** ಪ್ರತಿಭೆಯನ್ನು ಭಾವಯತ್ರೀ ಪ್ರತಿಭೆ ಮತ್ತು ಕಾರಯತ್ರೀ ಪ್ರತಿಭೆ ಎಂದು ಎರಡು ಪ್ರಕಾರವಾಗಿ ವಿಂಗಡಿಸಿದವರು

(1) ದಂಡಿ

(2) ಭಾಮಹ

(3) ರಾಜಶೇಖರ

(4) ಭಟ್ಟತೌತ

**48.** 'ಚತ್ತಾಣ, ಬೆದಂಡೆ' ಉಲ್ಲೇಖಗಳು ಈ ಕೃತಿಯಲ್ಲಿವೆ

(1) ವಡ್ಡಾರಾಧನೆ

(2) ಕವಿರಾಜಮಾರ್ಗ

(3) ಚಾವುಂಡರಾಯ ಪುರಾಣ

(4) ಆದಿ ಪುರಾಣ

**49.** 'ಪತಿಗಳೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರು' ದ್ರೌಪದಿಯ ಈ ಮಾತು ಕೆಳಗಿನ ಯಾವ ಅರ್ಥವನ್ನು ತಿಳಿಸುತ್ತದೆ ?

(1) ವಾಚ್ಯಾರ್ಥ

(2) ಲಕ್ಷ್ಯಾರ್ಥ

(3) ವ್ಯಂಗ್ಯಾರ್ಥ

(4) ವಿಶಿಷ್ಟಾರ್ಥ

**50.** ಕೆಳಗೆ ಕೊಟ್ಟಿರುವ ರಸಗಳ ಅನುಕ್ರಮಣಿಕೆಯಲ್ಲಿ ಸರಿಯಾದುದನ್ನು ಗುರ್ತಿಸಿ

(1) ವೀರ, ಅದ್ಭುತ, ಶೃಂಗಾರ, ಹಾಸ್ಯ, ರೌದ್ರ, ಕರುಣ, ಭಯ, ಭೀಭತ್ಸ

(2) ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯ, ಭೀಭತ್ಸ, ಅದ್ಭುತ

(3) ವೀರ, ಹಾಸ್ಯ, ಶೃಂಗಾರ, ಕರುಣ, ರೌದ್ರ, ಭೀಭತ್ಸ, ಅದ್ಭುತ, ಭಯ

(4) ಶೃಂಗಾರ, ಹಾಸ್ಯ, ವೀರ, ಕರುಣ, ರೌದ್ರ, ಭಯ, ಭೀಭತ್ಸ, ಅದ್ಭುತ

**51.** ಮಾಸ್ತಿಯವರ 'ಶ್ರೀರಾಮ ಪಟ್ಟಾಭಿಷೇಕ' ಮಹಾಕಾವ್ಯವು ಛಂದಸ್ಸಿನ ________ ಪ್ರಕಾರದಲ್ಲಿದೆ.

(1) ಸರಳ ರಗಳೆ

(2) ಚಂಪೂ

(3) ಷಟ್ಪದಿ

(4) ಕಂದ

**52.** ಡಿ.ಆರ್. ನಾಗರಾಜ್ ಅವರ ವಿಮರ್ಶಾ ಕೃತಿ

(1) ಮುನ್ನೋಟ

(2) ಗತಿಶೀಲ

(3) ಸಂಸ್ಕೃತಿ ಮತ್ತು ಉಪಸಂಸ್ಕೃತಿ

(4) ಅಮೃತ ಮತ್ತು ಗರುಡ

**53.** ಇಲ್ಲಿನ ಕವಿ ಕೃತಿಗಳನ್ನು ಸರಿ ಹೊಂದಿಸಿರಿ :

| | ಕವಿ | | ಕೃತಿ |
|---|---|---|---|
| A. | ಸೈಗೊಟ್ಟ ಶಿವಮಾರ | I. | ಗುಣಕಾಂತಿಯಂ |
| B. | ಅಸಗ | II. | ಗಜಾಷ್ಟಕ |
| C. | ದುರ್ವಿನೀತ | III. | ಹರಿವಂಶ |
| D. | ಗುಣವರ್ಮ | IV. | ಶಬ್ದಾವತಾರ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | IV | III | II | I |
| (2) | II | I | IV | III |
| (3) | III | IV | I | II |
| (4) | I | II | III | IV |

**54.** ಎಡ್ವರ್ಡ್ ಬುಲ್ಲೋನ ಸಿದ್ಧಾಂತ ಯಾವುದು ?

(1) ಶೋಧನಾ ತತ್ವ

(2) ಮಾನಸಿಕ ದೂರ

(3) ಅನುಕರಣೆ ಸಿದ್ಧಾಂತ

(4) ಕಾವ್ಯ ಪ್ರತಿಮೆ

**55.** ದ್ವಿವಚನ ಪ್ರತ್ಯಯ ಬಳಕೆಯಲ್ಲಿರುವ ಭಾಷೆ

(1) ಕನ್ನಡ

(2) ತೆಲುಗು

(3) ಸಂಸ್ಕೃತ

(4) ತಮಿಳು

**56.** ಇಲ್ಲಿನ ಕೃತಿಗಳ ಭಾಷಾ ಸ್ವರೂಪವನ್ನು ಹೊಂದಿಸಿರಿ :

| ಕೃತಿಗಳು | | ಭಾಷಾ ಸ್ವ |
|---|---|---|
| A. ಶಿವತತ್ವ ಚಿಂತಾಮಣಿ | I. | ಭಾಮಿನೀ ಷಟ್ಪದಿ |
| B. ಸೊಬಗಿನ ಸೋನೆ | II. | ಸಾಂಗತ್ಯ |
| C. ವೃಷಭಗೀತೆ | III. | ಭೋಗಷಟ್ಪದಿ |
| D. ಪ್ರಭುಲಿಂಗ ಲೀಲೆ | IV. | ವಾರ್ಧಕ ಷಟ್ಪದಿ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | IV | II | III | I |
| (2) | II | I | IV | III |
| (3) | III | IV | I | II |
| (4) | I | II | III | IV |

**57.** ಕನ್ನಡದ ಮೊದಲ ಕಾದಂಬರಿಕಾರರೆಂದು ಹೆಸರು ಪಡೆದವರು

(1) ಕುವೆಂಪು

(2) ಶಿವರಾಮ ಕಾರಂತರು

(3) ಎಂ.ಎಸ್. ಪುಟ್ಟಣ್ಣ

(4) ಗುಲ್ವಾಡಿ ವೆಂಕಟರಾಯ

**58.** ಆಧುನಿಕ ಕನ್ನಡ ಸಾಹಿತ್ಯದ "ಪ್ರಥಮ ಕಾದಂಬರಿಗಾರ್ತಿ" ಯಾರು ?

(1) ನಂಜನಗೂಡು ತಿರುಮಲಾಂಬ

(2) ಆರ್. ಕಲ್ಯಾಣಮ್ಮ

(3) ಶಾಂತದೇವಿ ಮಾಳವಾಡ

(4) ಚಿ.ನ. ಮಂಗಳಾ

**59.** ಜಿ.ಎಸ್. ಶಿವರುದ್ರಪ್ಪ ಇವರು ಅನುವಾದಿಸಿದ ಕೃತಿಯ ಹೆಸರೇನು ?

(1) ಫಕೀರ ಮೊಹನ ಸೇನಾಪತಿ

(2) ಪ್ರಾರಬ್ಧ ಮತ್ತು ಕಾಡುಕೋಳಿ

(3) ಅಸಮಾನ

(4) ಹೆಜ್ಜೆಗುರುತು

**60.** 'ಭಾರತೀಸುತ' ಇದು ಯಾರ ಕಾವ್ಯನಾಮ ?

(1) ಆದಿನಾಥ ನೇಮಿನಾಥ ಉಪಾಧ್ಯೆ

(2) ದೊಡ್ಡಬೆಲೆ ಲಕ್ಷ್ಮಿನರಸಿಂಹಾಚಾರ್ಯ

(3) ಎಸ್.ಆರ್. ನಾರಾಯಣರಾವ್

(4) ವೆಂಕಟೇಶ ಮಧ್ವರಾವ್ ಇನಾಂದಾರ್

**61.** ನವ್ಯ ಸಾಹಿತ್ಯದ ಲಕ್ಷಣ

(1) ವ್ಯಕ್ತಿ ವೈಶಿಷ್ಟ್ಯ

(2) ನಿಸರ್ಗ ನಿಷ್ಠೆ

(3) ಐತಿಹಾಸಿಕ ನೋಟ

(4) ಸಾಂಸ್ಕೃತಿಕ ಶೋಧನೆ

**62.** ಡಾ. ಎಂ.ಎಂ. ಕಲಬುರ್ಗಿಯವರ ಸಂಶೋಧನಾ ಮಹಾ ಪ್ರಬಂಧ

(1) ವಡ್ಡಾರಾಧನೆ

(2) ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

(3) ಸತ್ಯ ಮತ್ತು ಸೌಂದರ್ಯ

(4) ಸೌಂದರ್ಯ ಸಮೀಕ್ಷೆ

63. "ಸೂಕ್ತಿ ಸುಧಾರ್ಣವ" ಸಂಕಲನ ಗ್ರಂಥದ ಕರ್ತೃವಿನ ಹೆಸರೇನು ?

(1) ದುರ್ಗಸಿಂಹ

(2) ಗುಣನಂದಿ

(3) ಅಸಗ

(4) ಮಲ್ಲಿಕಾರ್ಜುನ

64. ಮಾರ್ಗವನ್ನು ಬಳಸದೆ ದೇಸಿ ಕನ್ನಡದಲ್ಲಿ ಕಾವ್ಯವನ್ನು ರಚಿಸಿದ ಕವಿ ಯಾರು ?

(1) ಆಂಡಯ್ಯ

(2) ಬ್ರಹ್ಮಶಿವ

(3) ಕೇಶಿರಾಜ

(4) ನಾಗಚಂದ್ರ

65. ರಾಜಾಶ್ರಯ ಮತ್ತು ರಾಜನಿಷ್ಠೆಯ ಹಂಗನ್ನು ತಿರಸ್ಕರಿಸಿದ ಸಾಹಿತ್ಯ ಯಾವುದು ?

(1) ಚಂಪೂಯುಗದ ಸಾಹಿತ್ಯ

(2) ವಚನಯುಗದ ಸಾಹಿತ್ಯ

(3) ಚತ್ತಾಣಯುಗದ ಸಾಹಿತ್ಯ

(4) ಬೆದಂಡೆಯುಗದ ಸಾಹಿತ್ಯ

66. ಹರಿಹರನು ರಚಿಸಿದ ಎರಡು ಶತಕಗಳನ್ನು ಗುರ್ತಿಸಿ

(1) ಪಂಪಾಶತಕ – ಚಂದ್ರಚೂಡಾಮಣಿ ಶತಕ

(2) ಸೋಮೇಶ್ವರಶತಕ – ಸೂರ್ಯ ಶತಕ

(3) ಪಂಪಾಶತಕ – ರಕ್ಷಾ ಶತಕ

(4) ರಕ್ಷಾಶತಕ – ಸೋಮೇಶ್ವರ ಶತಕ

67. "ಮಾತೆಂಬುದು ಜ್ಯೋತಿರ್ಲಿಂಗ" – ಮಾತಿನ ಮಹತ್ವವನ್ನು ನೀಡಿದ ವಚನಕಾರ ಯಾರು ?

(1) ಚನ್ನ ಬಸವಣ್ಣ

(2) ಬಸವೇಶ್ವರ

(3) ಜೇಡರ ದಾಸಮಯ್ಯ

(4) ಅಲ್ಲಮ ಪ್ರಭು

68. 'ಹದಿಬದೆಯ ಧರ್ಮ' ಕಾವ್ಯದ ಕೇಂದ್ರ ವಸ್ತು ಯಾವುದು ?

(1) ಮಾಯೆಯ ಸಂಕಟದ ಧರ್ಮ ನೀತಿ

(2) ಸರಸಸಾಹಿತ್ಯದ ಪರದೇವತೆಯ ಲಕ್ಷಣ

(3) ಪತಿವ್ರತೆಯರ ಧರ್ಮ ಕರ್ತವ್ಯ

(4) ಸಹಜ ಲೀಲಾವಿಲಾಸದ ಧ್ವನಿ

69. "ಹೊಸಗನ್ನಡದ ಮುಂಗೋಳಿ" ಎಂದು ಯಾರನ್ನು ಕರೆಯುತ್ತಾರೆ ?

(1) ನಂದಳಿಕೆಯ ಲಕ್ಷ್ಮೀನಾರಾಯಣಪ್ಪ

(2) ನಂದಳಿಕೆಯ ಗೋವಿಂದಯ್ಯ

(3) ವಿ.ಜಿ. ಭಟ್ಟ

(4) ನಿಖಿಲೇಶ್ವರ

70. ಹಲ್ಮಿಡಿ ಶಾಸನದ ಭಾಷೆಯನ್ನು 'ಪೂರ್ವದ ಹಳಗನ್ನಡ' ಎಂದು ಗುರ್ತಿಸಿದವರು

(1) ರೆವರೆಂಡ್ ಎಫ್ ಕಿಟೆಲ್

(2) ಬಿ.ಎಂ. ಶ್ರೀಕಂಠಯ್ಯ

(3) ಬಿ.ಎಲ್. ರೈಸ್

(4) ಹರ್ಮನ್ ಮೊಗ್ಲಿಂಗ್

**71.** ರಗಳೆಯ ಪ್ರಕಾರಗಳಲ್ಲಿ ಇದೂ ಒಂದು

(1) ಮಂದ ಮಾರುತ

(2) ಮಂದಾನಿಲ

(3) ಮಲಯಾಂಚಲ

(4) ಉತ್ಪಲ ಮಾಲಾ

**72.** ಕನ್ನಡದ ಮೊಟ್ಟ ಮೊದಲ ನಾಟಕ ಕೃತಿ ಎಂಬ ಪ್ರಸಿದ್ಧಿಗೆ ಪಾತ್ರವಾಗಿರುವ ಕೃತಿ

(1) ಅಶ್ವತ್ಥಾಮನ್

(2) ಗದಾಯುದ್ಧ

(3) ಮಿತ್ರವಿಂದಾ ಗೋವಿಂದ

(4) ಮಾಡಿದ್ದುಣ್ಣೋ ಮಹಾರಾಯ

**73.** "ಶ್ರೀ ವತ್ಸ ನಿಘಂಟು" – ಕೃತಿಕಾರ

(1) ಟಿ.ವಿ. ವೆಂಕಟಾಚಲ ಶಾಸ್ತ್ರಿ

(2) ಡಿ.ಎಲ್. ನರಸಿಂಹಾಚಾರ್

(3) ಎಫ್. ಕಿಟ್ಟೆಲ್

(4) ಜೆ.ವಿ. ವೆಂಕಟಸುಬ್ಬಯ್ಯ

**74.** ____________ ಸ್ಥಾಯೀಭಾವ ಅಲ್ಲ.

(1) ಉತ್ಸಾಹ

(2) ಭಯ

(3) ವಿಸ್ಮಯ

(4) ಸಮಾಧಿ

**75.** ಇವುಗಳಲ್ಲಿ ಸಂಚಾರಿ ಭಾವ ಯಾವುದು ?

(1) ಶೋಕ

(2) ವಿಷಾದ

(3) ವಿಸ್ಮಯ

(4) ಭಯ

**76.** ರಸಭಂಗದ ಮೂಲ ಕಾರಣ

(1) ಅನೌಚಿತ್ಯ

(2) ಜಡತ್ವ

(3) ಮೂರ್ಖತೆ

(4) ಪುನರುಕ್ತಿ

**77.** ಗುಂಪಿಗೆ ಸೇರದ ಗಣ ಯಾವುದು ?

(1) ಬ್ರಹ್ಮಗಣ

(2) ವಿಷ್ಣುಗಣ

(3) ಇಂದ್ರಗಣ

(4) ರುದ್ರಗಣ

**78.** ನಾಗವರ್ಮನು ಹೇಳುವ 5 'ಅಕ್ಕರ'ಗಳಲ್ಲಿ ಇದೂ ಒಂದು

(1) ಮರುವಕ್ಕರ

(2) ದೊರೆಯಕ್ಕರ

(3) ಕೊನೆಯಕ್ಕರ

(4) ಮಧುರಾಕ್ಕರ

**79.** ಇಂಗ್ಲೀಷಿನ 'ಓಡ್' (Ode) ಕನ್ನಡದಲ್ಲಿ __________ ಆಗಿ ಮೈದಾಳಿದೆ ?

(1) ಸುನೀತ

(2) ಅನ್ವಿತಾ

(3) ಪ್ರಗಾಥ

(4) ಯಾವುದೂ ಅಲ್ಲ

**80.** ಇವರಲ್ಲಿ ಕವಿ–ಲಾಕ್ಷಣಿಕ ಯಾರು ?

(1) ಪಿ.ವಿ. ಕಾಣೇ

(2) ಆನಂದ ವರ್ಧನ

(3) ಎಸ್.ಕೆ. ಡೇ

(4) ಕೆ.ಸಿ. ಪಾಂಡೆ

**81.** ಅರವಿಂದ ಮಾಲಗತ್ತಿ ಅವರ ಆತ್ಮ ಕಥೆ

(1) ಗೌರ್ಮೆಂಟ್ ಬ್ರಾಹ್ಮಣ

(2) ಈ ಹರಯಕ್ಕೆ

(3) ಮೂರನೇ ಕಣ್ಣು

(4) ಕಪ್ಪು ಕಾವ್ಯ

**82.** ಕುವೆಂಪು ಅವರ 'ಚಿತ್ರಾಂಗದ' ಒಂದು

(1) ಮಹಾಕಾವ್ಯ

(2) ಖಂಡಕಾವ್ಯ

(3) ಪೌರಾಣಿಕ ಕಾವ್ಯ

(4) ಪ್ರೇಮ ಕಾವ್ಯ

**83.** ಧ್ವನಿತತ್ತ್ವದ ವಿಮರ್ಶೆಗೆ ಪ್ರತ್ಯೇಕ ಗ್ರಂಥ ರಚಿಸಿ ಖಂಡಿಸಿದವರು ಯಾರು ?

(1) ಆನಂದ ವರ್ಧನ

(2) ಭಟ್ಟಾಕಳಂಕ

(3) ಲೊಲ್ಲಟ

(4) ಭಟ್ಟನಾಯಕ

**84.** ಶಾಸ್ತ್ರಸರಣಿಯಲ್ಲಿ 'ಕಾವ್ಯ ಪ್ರಕಾಶ' ರಚಿಸಿದವರು

(1) ಮಮ್ಮಟ

(2) ಭೋಜ

(3) ಅಭಿನವಗುಪ್ತ

(4) ಮಹಿಮ ಭಟ್ಟ

**85.** ರಾಮಚಂದ್ರ – ಗುಣಚಂದ್ರರ ಗುರು

(1) ದಂಡಿ

(2) ಭಾಮಹ

(3) ಹೇಮಚಂದ್ರ

(4) ಅಭಿನವಗುಪ್ತ

**86.** 'ಭಿನ್ನಂ ದ್ವಿಧಾಸ್ವಭಾವೋಕ್ತಿರ್ವಕ್ರೋಕ್ತಿಶ್ಚೇತಿ ವಾಙ್ಮಯಂ' ಈ ಹೇಳಿಕೆಯನ್ನು ಹೊಂದಿರುವ ಕೃತಿ

(1) ಕಾವ್ಯಾಲಂಕಾರ

(2) ಕಾವ್ಯಾದರ್ಶ

(3) ಕಾವ್ಯಾಲಂಕಾರ ಸೂತ್ರವೃತ್ತಿ

(4) ವಕ್ರೋಕ್ತಿ ಜೀವಿತ

87. 'ರಸಾಭಾಸ ಭಾವಾಭಾಸಗಳು ದೋಷವಲ್ಲ' ಎಂಬ ಹೇಳಿಕೆಯನ್ನು ಹೊಂದಿರುವ ಗ್ರಂಥ

(1) ರಸಾರ್ಣವ

(2) ರಸಕಲಿಕ

(3) ರಸರತ್ನಾಕರ

(4) ಧ್ವನ್ಯಾಲೋಕಲೋಚನ

88. ಪಾಣಿನಿಯ ವ್ಯಾಕರಣದಲ್ಲಿ ಒಟ್ಟು ಎಷ್ಟು ಅಧ್ಯಾಯಗಳಿವೆ ?

(1) ಎಂಟು

(2) ಐದು

(3) ಏಳು

(4) ಆರು

89. 'ಲಿಂಗ್ವಿಸ್ಟಿಕ್ಸ್ ' (Lignuistics) ಎಂಬುದು ಮೂಲತಃ ಈ ಕೆಳಗಿನ ಯಾವ ಭಾಷೆಯ ಶಬ್ದ ?

(1) ಲ್ಯಾಟಿನ್ ಶಬ್ದ

(2) ಅರೇಬಿಕ್ ಶಬ್ದ

(3) ಆಂಗ್ಲ ಶಬ್ದ

(4) ರೋಮನ್ ಶಬ್ದ

90. 'Morphology' ಎಂದರೆ ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ ?

(1) ಧ್ವನಿಮಾ ವಿಜ್ಞಾನ

(2) ಆಕೃತಿಮಾ ವಿಜ್ಞಾನ

(3) ವಾಕ್ಯ ವಿಜ್ಞಾನ

(4) ಅರ್ಥ ವಿಜ್ಞಾನ (semantics)

91. ಭಾಷೆಯ 'ಅನುಕರಣವಾದ' ದ ಪ್ರತಿಪಾದಕನಾರು ?

(1) ಲೀಬ್ನಿಜ್

(2) ಮ್ಯಾಕ್ಸಮುಲ್ಲರ್

(3) ಯಸ್ಪರ್ಸನ್

(4) ವುಂಡ್ಸ್

92. 'ಕ' ಎಂಬ ವರ್ಣ

(1) ಮೂರ್ಧನ್ಯ

(2) ಓಷ್ಠ

(3) ತಾಲವ್ಯ

(4) ಕಂಠಸ್ಯ

93. 'ಎಸಳ್ಗಳ್' ಎಂಬುದ ಈ ಕೆಳಗಿನ ಯಾವ ವ್ಯಾಕರಣಕ್ಕೆ ಉದಾಹರಣೆ ?

(1) ಸಂಧಿ

(2) ಸಮಾಸ

(3) ಶಿಥಿಲದ್ವಿತ್ವ

(4) ವಿಸಂಧಿ

94. 'ನಮೋಸ್ತುಗಳ್' ಈ ಕೆಳಗಿನ ಯಾವುದಕ್ಕೆ ಉದಾಹರಣೆ ಯಾಗಿದೆ ?

(1) ಸಮುಪಾತ್ತ ಕ್ರಿಯಾಲಿಂಗ

(2) ಸಮಸಂಸ್ಕೃತ ಲಿಂಗ

(3) ವಾಕ್ಯಮಾಲಾ ಲಿಂಗ

(4) ಕೃತ ಲಿಂಗ

**95.** " 'ಭಾಷೆ ಎಂಬುದು ಅಭಿಪ್ರಾಯಗಳನ್ನು ವ್ಯಕ್ತಗೊಳಿಸುವ ಸಂಕೇತಗಳ ವ್ಯವಸ್ಥೆ" – ಈ ವ್ಯಾಖ್ಯೆ ಯಾವ ಭಾಷಾ ವಿಜ್ಞಾನಿಯದು ?

(1) ಎಫ್.ಡಿ. ಸಸ್ಸೂರ್

(2) ಎಡ್ವರ್ಡ್ ಸಫೀರ್

(3) ಪ್ಲೇಟೋ

(4) ವೆನ್ರಿಚ್

**96.** ಹರಿಹರನು ತನ್ನ 'ಗಿರಿಜಾಕಲ್ಯಾಣ' ಕಾವ್ಯದ ವಸ್ತುವನ್ನು ಕಾಳಿದಾಸನ ಯಾವ ಕೃತಿಯಿಂದ ಪಡೆದಿದ್ದಾನೆ ?

(1) ಮೇಘದೂತ

(2) ಕುಮಾರಸಂಭವ

(3) ರಘುವಂಶ

(4) ಅಭಿಜ್ಞಾನ ಶಾಕುಂತಲ

**97.** ಸಾಂಗತ್ಯದ ಸುಗ್ಗಿಯ ಕಾಲ

(1) 16 ಮತ್ತು 17 ನೇ ಶತಮಾನಗಳು

(2) 15 ಮತ್ತು 16 ನೇ ಶತಮಾನಗಳು

(3) 14 ಮತ್ತು 15 ನೇ ಶತಮಾನಗಳು

(4) 17 ಮತ್ತು 18 ನೇ ಶತಮಾನಗಳು

**98.** ಕೆಂಪುನಾರಾಯಣನ 'ಮುದ್ರಾಮಂಜೂಷ' ಕೃತಿಯು ಕೆಳಗಿನ ಯಾವ ಪ್ರಕಾರದ ವಿಶಿಷ್ಟ ಲಕ್ಷಣಗಳನ್ನೊಳಗೊಂಡಿದೆ ?

(1) ಲಲಿತ ಪ್ರಬಂಧ

(2) ಕಾದಂಬರಿ

(3) ನಾಟಕ

(4) ರೂಪಕ

**99.** 'ತಿರುಕುಲತ್ತಾರ್" ಎಂಬ ನಾಮಕರಣದ ಕ್ರಾಂತಿಕಾರಿ ನಿರ್ಧಾರ ಯಾರದ್ದು ?

(1) ರಾಮಾನುಜರು

(2) ಶಂಕರಾಚಾರ್ಯರು

(3) ಮಧ್ವಾಚಾರ್ಯರು

(4) ಗೀತಾಚಾರ್ಯರು

**100.** "Defence of poetry" ಕೃತಿಯ ಕರ್ತೃ

(1) ಮ್ಯಾಥ್ಯೂ ಆರ್ನಾಲ್ಡ್

(2) ವರ್ಡ್ಸ್‌ವರ್ತ್

(3) ಜೆ.ಎ. ರಿಚರ್ಡ್ಸ್

(4) ಶೆಲ್ಲಿ

## SPACE FOR ROUGH WORK

# SPACE FOR ROUGH WORK